**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಹಾಲಪ್ಪ | ಪಿಡಬ್ಲೂ - 17 |
| ತಂದೆಯ ಹೆಸರು | - ಸಗನಯ್ಯ | ಸಿಡಬ್ಲೂ -31 |
| ವಯಸ್ಸು | - 46 ವರ್ಷ | |
| ಉದ್ಯೋಗ | - ಮುಖ್ಯ ಪೇದೆ 41, ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಚಿಕ್ಕಮಗಳೂರು | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನಾನು 2020 ನೇ ಇಸವಿಯಿಂದ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 20-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಃ 352/2021 ರ ಪ್ರಕರಣದಲ್ಲಿ ಠಾಣೆಗೆ ಒದಗಿಸಲಾಗಿದ್ದ ಸೋನಿ ಡಿಜಿಟಲ್ ಹ್ಯಾಂಡಿಕ್ಯಾಮೆರದಲ್ಲಿದ್ದ ಅಮಾನತು ಮಹಜರ್ ಮತ್ತು ಶವ ತನಿಖಾ ಕಾಲದಲ್ಲಿ ತೆಗೆಯಲಾಗಿದ್ದ ಫೋಟೋಗಳನ್ನು ತನಿಖಾಧಿಕಾರಿಗಳಾಗಿದ್ದ ಚಾಸಾ.39 ರವರ ಸೂಚನೆಯ ಮೇರೆಗೆ ಠಾಣೆಗೆ ಒದಗಿಸಲಾಗಿದ್ದ ಹೆಚ್.ಪಿ. ಕಂಪ್ಯೂಟರಿಗೆ ವಾಟ್ಸಪ್ ವೆಬ್ ಮುಖಾಂತರ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ನಂತರ ಅವುಗಳನ್ನು ಯಥಾಸ್ಥಿತಿಯಲ್ಲಿ ಖಾಲಿ ಸಿಡಿಗೆ ವರ್ಗಾಯಿಸಿ ಅದನ್ನು ತನಿಖಾಧಿಕಾರಿಗಳಿಗೆ ಕೊಟ್ಟೆನು. ಸದರಿ ಫೋಟೋಗಳನ್ನು ತೆಗೆಯಲಾಗಿದ್ದ ಕ್ಯಾಮೆರ, ನಾನು ಅವುಗಳನ್ನು ಮೇಲೆ ಹೇಳಿದಂತೆ ವರ್ಗಾಯಿಸಿದ ಕಂಪ್ಯೂಟರ್ ಮತ್ತು ಸಿಡಿ ಸುಸ್ಥಿತಿಯಲ್ಲಿ ಇದ್ದವು. ಆ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ತನಿಖಾಧಿಕಾರಿಗಳಿಗೆ ಕೊಟ್ಟೆನು. ಸದರಿ ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಿಡಿಯನ್ನು ಈಗಾಗಲೇ ನಿಪಿ.34 ಎಂದು ಗುರುತಿಸಲಾಗಿರುತ್ತದೆ. ಸದರಿ ದೃಢೀಕರಣ ಪತ್ರವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದೃಢೀಕರಣ ಪತ್ರವನ್ನು ನಿಪಿ.38 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು. ನಿಪಿ.34 ಸಿಡಿಯನ್ನು ನ್ಯಾಯಾಲಯದ ಕಂಪ್ಯೂಟರಿಗೆ ಅಳವಡಿಸಿ ಆರೋಪಿ, ಆತನ ಪರ ವಕೀಲರು ಮತ್ತು ವಿಶೇಷ ಸರ್ಕಾರಿ ಅಭಿಯೋಜಕರ ಸಮಕ್ಷಮ ಪ್ಲೇ ಮಾಡಿ ತೋರಿಸಲಾಗಿ ಅವುಗಳಲ್ಲಿ ನಾನು ಮೇಲೆ ಹೇಳಿದಂತೆ ವರ್ಗಾಯಿಸಿದ ಫೋಟೋಗಳು ಕಂಡುಬರುವುದಾಗಿ

ನುಡಿದಿರುತ್ತಾರೆ. ಸಾಕ್ಷಿ ಈಗಾಗಲೇ ನಿಪಿ.9, 10, 16 ರಿಂದ 21 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಮೇಲೆ ಹೇಳಿದಂತೆ ನಾನು ಕ್ಯಾಮೆರದಿಂದ ಕಂಪ್ಯೂಟರಿಗೆ, ನಂತರ ಸಿಡಿಗೆ ವರ್ಗಾಯಿಸಿದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ.

3. ದಿಃ 19-11-2021 ರಂದು ಚಾಸಾ.39 ರವರು ನೇಮಿಸಿದ್ದ ಮೇರೆಗೆ ಮೃತ ಶೇಷಪ್ಪರವರ ಶವ ಬೆಂಗಾವಾಲಿನ ಕರ್ತವ್ಯವನ್ನು ನಿರ್ವಹಿಸಿದ್ದೇನೆ, ಆತನ ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಶವವನ್ನು ಫ್ರಾಸಾ.2 ರವರಿಗೆ ಬಿಟ್ಟುಕೊಟ್ಟು ರಸೀದಿ ಪಡೆದುಕೊಂಡೆನು. ಸದರಿ ರಸೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ರಸೀದಿಯನ್ನು ನಿಪಿ.8 ಎಂದು ಗುರುತಿಸಲಾಗಿರುತ್ತದೆ.

4. ನನಗೆ ಡಿಜಿಟಲ್ ಕ್ಯಾಮೆರದಲ್ಲಿದ್ದ ಫೋಟೋಗಳನ್ನು ಕಂಪ್ಯೂಟರಿಗೆ ಮತ್ತು ಕಂಪ್ಯೂಟರಿನಿಂದ ಸಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

5. ಬರವಣಿಗೆ ಮುಖಾಂತರ ನಿಮ್ಮನ್ನು ಶವ ಬೆಂಗಾವಾಲಿಗೆ ನೇಮಿಸಲಾಗಿತ್ತೇ ಎಂದರೆ ಸಾಕ್ಷಿ ಮೌಖಿಕವಾಗಿ ನೇಮಿಸಲಾಗಿತ್ತು ಎನ್ನುತ್ತಾರೆ. ಆ ದಿನ ನೀವು ಯಾವ ಕರ್ತವ್ಯದಲ್ಲಿದ್ದೀರಿ ಎಂದರೆ ಸಾಕ್ಷಿ ಠಾಣಾ ಕರ್ತವ್ಯದಲ್ಲಿ ಎನ್ನುತ್ತಾರೆ. ನೀವು ಶವದ ಬೆಂಗಾವಾಲಿಗೆ ಹೋದಾಗ ಶವ ಎಲ್ಲಿತ್ತು ಎಂದರೆ ಸಾಕ್ಷಿ ಚಿಕ್ಕಮಗಳೂರು ಎಂ.ಜಿ. ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಎನ್ನುತ್ತಾರೆ.

6. ವಾಟ್ಸಪ್ ವೆಬ್ ಮುಖಾಂತರ ಫೋಟೋಗಳನ್ನು ಕಂಪ್ಯೂಟರಿಗೆ ವರ್ಗಾಯಿಸಿದ್ದಾಗಿ ಹೇಳಿದ್ದೀರಿ ಸದರಿ ವಾಟ್ಸಪ್ ನಂಬರ್ ಮತ್ತು ಅದು ಯಾರಿಗೆ ಸೇರಿದ್ದು ಎಂದು ನಿಪಿ.38 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವ ದಿನಾಂಕ ಮತ್ತು ಸಮಯದಂದು ಅವುಗಳನ್ನು ವಾಟ್ಸಪ್ ಮುಖಾಂತರ ವರ್ಗಾಯಿಸಲಾಯಿತು ಎಂದು ನಿಪಿ.38 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲಾ ಸುಳ್ಳು ಆ ರೀತಿ ನೀವು ಯಾವುದೇ ಕರ್ತವ್ಯವನ್ನು ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ನಿಪಿ.38 ಕ್ಕೆ ಕೇವಲ ಸಹಿ ಮಾಡಿಕೊಟ್ಟಿದ್ದೀರಾ ಎಂದರೆ ಸರಿಯಲ್ಲ.

7. ಹಣ ಸಂದಾಯ ರಸೀದಿಗೆ ಹಣವನ್ನು ನೀಡಿದವರು ಸಹಿ ಮಾಡಬೇಕು ಎಂದರೆ ಸರಿ. ನೀವು ನಿಪಿ.8 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಸದರಿ ರಸೀದಿಯನ್ನು ನೀವೇ ಪಡೆದುಕೊಂಡಿದ್ದೀರಿ ಎಂದು ಹೇಳಲು ಅದರ ಮೇಲೆ ಯಾವುದೇ ಕುರುಹುಗಳು ಇಲ್ಲ ಎಂದರೆ ಸರಿ. ನೀವು ಶವದ ಬೆಂಗಾವಾಲಿಗೆ ನೇಮಕಗೊಂಡಿದ್ದಾಗಿ, ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಫ್ರಾಸಾ.2 ರವರಿಗೆ

ನೀಡಿ ನಿಪಿ.8 ರಂತೆ ರಸೀದಿ ಪಡೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

8. ನಿಮಗೆ ಕಂಪ್ಯೂಟರ್ ಬಗ್ಗೆ ಪರಿಣಿತಿ, ಅನುಭವ ಮತ್ತು ತರಬೇತಿಯ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮಗೆ ಕಂಪ್ಯೂಟರ್ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ